ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಆಯುಕ್ತಾಲಯ
ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು – 560 009.

ಸಂಖ್ಯೆ : ಕಪಂರಾಆ/ಅಭಿವೃದ್ಧಿ/625/2022 ದಿನಾಂಕ:27.12.2022

# ಸುತ್ತೋಲೆ

**ವಿಷಯ:** ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ "ಒದುವ ಬೆಳಕು"ಅಂಗವಾಗಿ "ಗ್ರಂಥಾಲಯದೆಡೆಗೆ ನಾನು ನನ್ನ ಸ್ನೇಹಿತರು" ಅಭಿಯಾನ ಆಯೋಜಿಸುವ ಕುರಿತು.

***

ತಮಗೆಲ್ಲರಿಗೂ ತಿಳಿದಿರುವಂತೆ ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಮಕ್ಕಳನ್ನುಒದುವುದು ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು "ಒದುವ ಬೆಳಕು" ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ಸದರಿ ಕಾರ್ಯಕ್ರಮದ ಶಾಲಾ ಮಕ್ಕಳನ್ನು, ವಿಶೇಷವಾಗಿ ಗ್ರಾಮೀಣ ಮಕ್ಕಳನ್ನು ವ್ಯವಸ್ಥಿತವಾಗಿ ಕಲಿಕಾ ಕ್ಷೇತ್ರಕ್ಕೆ ಮರಳಿ ತರುವ ಗುರಿಯನ್ನು ಹೊಂದಲಾಗಿದೆ. ಗ್ರಂಥಾಲಯಗಳನ್ನು ಗ್ರಾಮೀಣ ಜ್ಞಾನ ಕೇಂದ್ರಗಳನ್ನಾಗಿಸಲು ಗ್ರಂಥಾಲಯಗಳ ನವೀಕರಣ, ಡಿಜಿಟಲೀಕರಣ ಸೇರಿದಂತೆ ವಿವಿಧ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಈ ವರ್ಷವೂ "ಒದುವ ಬೆಳಕು" ಕಾರ್ಯಕ್ರಮದ ಅಡಿಯಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಹಲವಾರು ಅಭಿಯಾನಗಳ ಮೂಲಕ ಪ್ರತೀ ತಿಂಗಳು ಉಪಯುಕ್ತ ಚಟುವಟಿಕೆಯನ್ನು ಸಮರ್ಪಕವಾಗಿ ಆಯೋಜಿಸಲಾಗಿದ್ದು, ಗ್ರಂಥಾಲಯಗಳನ್ನು ಗ್ರಾಮದ ಎಲ್ಲರೂ ಉಪಯೋಗಿಸಲು ಅವಕಾಶ ಕಲ್ಪಿಸುವ ಅವಶ್ಯಕತೆ ಇದೆ. ಗ್ರಾಮೀಣ ಪ್ರದೇಶದ ಎಲ್ಲಾ ಮಕ್ಕಳು, ಹದಿಹರೆಯದವರು, ಯುವ ವಯಸ್ಕರು, ವಯಸ್ಕರು ಹಾಗೂ ಹಿರಿಯ ನಾಗರೀಕರು ಗ್ರಂಥಾಲಯಗಳ ಉಪಯೋಗಗಳನ್ನು ಪಡೆಯಲು ಅವಕಾಶವನ್ನು ಕಲ್ಪಿಸುವ ಉದ್ದೇಶದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು **"ಗ್ರಂಥಾಲಯದೆಡೆಗೆ ನಾನು ನನ್ನ ಸ್ನೇಹಿತರು" ಜನವರಿ 1 ರಿಂದ 31ನೇ ತಾರೀಖಿನವರೆಗೆ** ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳಲ್ಲಿ ಆಯೋಜಿಸಲು ನಿರ್ಧರಿಸಿದೆ.

**ಈ ಚಟುವಟಿಕೆಯ ಉದ್ದೇಶ:**

- ಸ್ನೇಹಿತರೊಂದಿಗೆ ಗ್ರಂಥಾಲಯಕ್ಕೆ ಬಂದು ಕಲಿಯಲು/ ಒದಲು ಅವಕಾಶ ಮಾಡಿಕೊಡುವುದು.
- ಮಕ್ಕಳು, ಹದಿಹರೆಯದವರು, ಯುವ ವಯಸ್ಕರು, ವಯಸ್ಕರು ಹಾಗೂ ಹಿರಿಯ ನಾಗರಿಕರಲ್ಲಿ ಒದುವ ಹವ್ಯಾಸವನ್ನು ಹೆಚ್ಚಿಸುವುದು.
- ಗ್ರಂಥಾಲಯಗಳಲ್ಲಿ ಮಕ್ಕಳ, ಹದಿಹರೆಯದವರ ಹಾಗೂ ಯುವ ವಯಸ್ಕರ ನೋಂದಣಿ ಹೆಚ್ಚಿಸುವುದು.
- ಮಕ್ಕಳಿಗೆ ಒದು ಬರೆಯುವ ಜೊತೆಗೆ ಕಲಿಕಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಒಬ್ಬರಿಗೊಬ್ಬರು ಸಹಾಯವಾಗುವಂತೆ ಅವರಲ್ಲಿ ಬಾಂಧವ್ಯ ಹೆಚ್ಚಿಸುವುದು.
- ಮಕ್ಕಳು ಹಾಗೂ ಯುವ ವಯಸ್ಕರು ಜೊತೆಯಾಗಿ ಸಂಯೋಜಿತ ಅಧ್ಯಯನ ಮಾಡಲು ಅವಕಾಶ ಕಲ್ಪಿಸುವುದು.
- ಶಾಲೆಯಲ್ಲಿ ಕಲಿಸಿದ ಪಠ್ಯವನ್ನು ಗ್ರಂಥಾಲಯದಲ್ಲಿ ಮತ್ತೊಮ್ಮೆ ಸ್ನೇಹಿತರೊಂದಿಗೆ ಕಲಿಯಲು ಸಹಾಯ ಮಾಡುವುದು.

- ವಯಸ್ಕರು ಹಾಗೂ ಹಿರಿಯ ನಾಗರೀಕರು ಗ್ರಂಥಾಲಯಗಳಲ್ಲಿ ಉಪಯುಕ್ತವಾಗಿ ಸಮಯ ಕಳೆಯಲು ಅವಕಾಶ ಕಲ್ಪಿಸುವುದು. ದಿನಪತ್ರಿಕೆ, ಕಾದಂಬರಿ, ಭಾರತೀಯ ಸಂಸ್ಕೃತಿ ಮತ್ತು ಕಲೆಗೆ ಸಂಬಂಧಿಸಿದ ಹಾಗೂ ಇತರೆ ಪುಸ್ತಕಗಳನ್ನು ಓದುವುದಲ್ಲದೆ, ಸರ್ಕಾರದಿಂದ ದೊರೆಯುವ ಸೇವೆಗಳು ಮತ್ತು ಸೌಲಭ್ಯಗಳ ಮಾಹಿತಿಯನ್ನು ಗ್ರಂಥಾಲಯಗಳ ಮೂಲಕ ಪಡೆದು ತಮ್ಮ ಸ್ನೇಹಿತರೊಂದಿಗೆ ಸೇರಿ ಗ್ರಾಮವನ್ನು ಅಭಿವೃದ್ಧಿಗೊಳಿಸಲು ಜೊತೆಯಾಗಿ ಚರ್ಚೆ ಮಾಡಿ ಗ್ರಾಮಗಳ ಏಳಿಗೆಗೆ ಕೈಜೋಡಿಸುವುದು.

**ಈ ಕೆಳಕಂಡ ನಿರ್ದೇಶನಗಳನ್ನು ಪಾಲಿಸಿ ಅಭಿಯಾನ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು.**

- ಗ್ರಂಥಾಲಯದ ಮೇಲ್ವಿಚಾರಕರು ಮಕ್ಕಳು, ಹದಿಹರೆಯದವರು, ಯುವ ವಯಸ್ಕರು, ವಯಸ್ಕರು ಹಾಗೂ ಹಿರಿಯ ನಾಗರಿಕರು ಸ್ನೇಹಿತರ ಜೊತೆ ಬಂದಾಗ ಅವರ ಹೆಸರನ್ನು ಕಡ್ಡಾಯವಾಗಿ ನೋಂದಾಯಿಸಿಕೊಳ್ಳುವುದು.
- ಸ್ನೇಹಿತರೊಂದಿಗೆ ಬಂದ ಮಕ್ಕಳಿಗೆ ಗ್ರಂಥಾಲಯದ ಮೇಲ್ವಿಚಾರಕರು ವಿವಿಧ ರೀತಿಯ ಚಟುವಟಿಕೆಗಳನ್ನು ನೀಡಿ ಪ್ರೋತ್ಸಾಹಿಸುವುದು.
- ಗ್ರಂಥಾಲಯದ ಮೇಲ್ವಿಚಾರಕರು ಎಲ್ಲರೂ ಗ್ರಂಥಾಲಯದ ಸಮಯವನ್ನು ಉಪಯುಕ್ತವಾಗಿ ಬಳಸುವಂತೆ ಪ್ರೋತ್ಸಾಹಿಸುವುದು.
- ಜೊತೆಯಾಗಿ ಬಂದವರು ಗುಂಪಾಗಿ ಸೇರಿ ಸದ್ದು ಮಾಡದಂತೆ ಗಮನಹರಿಸುವುದು.
- ಗ್ರಾಮ ಪಂಚಾಯತಿ ವ್ಯಾಪ್ತಿಯ ಶಾಲಾ ಶಿಕ್ಷಕರಿಂದ/ ಎನ್ ಜಿ ಓ ಸಂಸ್ಥೆಗಳಿಂದ ಮಕ್ಕಳಿಗೆ, ಹಾಗೂ ಯುವ ವಯಸ್ಕರಿಗೆ ಅನುಕೂಲವಾಗುವ ವಿವಿಧ ಪ್ರಕಾರಗಳ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವುದು.
- ಗ್ರಂಥಾಲಯಕ್ಕೆ ಸ್ನೇಹಿತರನ್ನು ಕರೆತರುವ ಶಾಲಾ ಮಕ್ಕಳನ್ನು ಪ್ರೋತ್ಸಾಹಿಸಲು ತಮ್ಮ ಆಯ್ಕೆಯ ಪುಸ್ತಕವನ್ನು ಗಟ್ಟಿಯಾಗಿ ಓದುವ ಅವಕಾಶ ಪಡೆಯಬಹುದು.
- ಸ್ನೇಹಕ್ಕೆ ಸಂಬಂಧಿಸಿದಂತೆ ವಿಶೇಷ ಆಟಗಳು ಮತ್ತು ಚಟುವಟಿಕೆಗಳನ್ನು ಆಯೋಜಿಸುವುದು.
- ಜೋಡಿಯಾಗಿ ಗ್ರಂಥಾಲಯಕ್ಕೆ ಹೋಗುಬಹುದಾದ ಮಕ್ಕಳನ್ನು ಗುರುತಿಸಲು ಶಾಲೆಯಲ್ಲಿ ಶಿಕ್ಷಕರು ಸಹಾಯ ಮಾಡುವುದು.

**"ಗ್ರಂಥಾಲಯದೆಡೆಗೆ ನಾನು ನನ್ನ ಸ್ನೇಹಿತರು"** ಎಂಬ ಒಂದು ತಿಂಗಳ ಅಭಿಯಾನದಲ್ಲಿ ಹೆಚ್ಚು ಸ್ನೇಹಿತರನ್ನು **(10 ಕ್ಕಿಂತಲೂ ಹೆಚ್ಚು**) ಕರೆತಂದು ನೊಂದಣಿ ಮಾಡಿಸುವ ಮಕ್ಕಳಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅಥವಾ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಸಹಿ ಮಾಡಿದ ಪ್ರಶಂಸನಾ ಪತ್ರವನ್ನು ನೀಡುವುದು.

ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು, **ಗ್ರಾಮಪಂಚಾಯಿತಿಯ ಎಲ್ಲಾ ಮಕ್ಕಳನ್ನು ಗ್ರಂಥಾಲಯಕ್ಕೆ ನೊಂದಾಯಿಸುವ (100% enrolment of children) ಗ್ರಂಥಾಲಯದ ಮೇಲ್ವಿಚಾರಕರನ್ನು ಗುರುತಿಸಿ,** ಅವರ ವಿವರಗಳನ್ನು ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ಜಿಲ್ಲೆಯ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಅಧಿಕೃತವಾಗಿ **kprcdata2022@gmail.com** ಇಮೇಲ್ ಗೆ ಕಳುಹಿಸುವುದು.

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು.

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ(ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)

3. ರಾಜ್ಯದ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ರವರಿಗೆ ಸೂಕ್ತ ಬೆಂಬಲ ಮತ್ತು ಸಹಕಾರ ನೀಡಲು ಕ್ರಮವಹಿಸುವುದು.
5. ಮಾಹಿತಿ ಕೇಂದ್ರ/ವೆಬ್ಸೈಟ್, ಗ್ರಾಅಪ ಇಲಾಖೆ.

<u>ಪ್ರತಿಯನ್ನು:</u>

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು. -560 001
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.-560 001
3) ಕಛೇರಿ ಪ್ರತಿ.